# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

## ಸಿ.ಸಿ. 645/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಬಿವುಲ್ಲಾ | ಪ್ರಾ.ಸಾಃ2 |
| ತಂದೆಯ/ಗಂಡನ ಹೆಸರು | : | ಮೆಹಬೂಬ್ ಬಾಷ | ಚಾಸಾಃ3 |
| ವಯಸ್ಸು | : | 47 ವರ್ಷ | |
| ಕೆಲಸ | : | ಆಟೋ ಚಾಲಕ | ಸಾ ಪ್ರ ಬೋ |
| ವಾಸ | : | ಗುಂಡೇರಿ ಗ್ರಾಮ | ದಿಃ29.01.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಚಾಸಾ.2 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಸಾಕ್ಷಿ ನಿಪಿ.2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ.2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.4 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ.4(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಗುಂಡೇರಿ ಗ್ರಾಮದ ರಾಘವೇಂದ್ರ ವೈನ್‌ಶಾಪ್ ಬಳಿ ಮಾಡಿರುತ್ತೇನೆ. ಸದರಿ ಸಹಿಗಳನ್ನು ಸುಮಾರು 4-5 ವರ್ಷಗಳ ಹಿಂದೆ ಮಾಡಿರುತ್ತೇನೆ. ಪೊಲೀಸರು ಮಹಜರು ಮಾಡುತ್ತಿದ್ದೇವೆ ಎಂದು ಹೇಳಿ ಕರೆದು ನಮ್ಮ ಸಹಿಗಳನ್ನು ಪಡೆದಿರುತ್ತಾರೆ. ಯಾವ ವಿಚಾರಕ್ಕೆ ಮಹಜರನ್ನು ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿ ಮಹಜರಿನ ಕಾಲಕ್ಕೆ ತೆಗೆದ ಛಾಯಾಚಿತ್ರದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ಛಾಯಾಚಿತ್ರವನ್ನು ನಿಪಿ.7 ಎಂದು ಗುರುತಿಸಲಾಯಿತು. ಸದರಿ ಮಹಜರಿನ ಸಮಯದಲ್ಲಿ ನನ್ನೊಂದಿಗೆ ಚಾಸಾ.2 ರವರು ಇದ್ದರು. ಚಾಸಾ.2 ರವರು ಸಹ ಮಹಜರುಗಳಿಗೆ ಸಹಿ ಮಾಡಿರುತ್ತಾರೆ. ಈ ವಿಚಾರದ ಕುರಿತು ನಾನು ತನಿಖಾಧಿಕಾರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

2. 2020 ರ ಮಾರ್ಚ್ ತಿಂಗಳಲ್ಲಿ ಕೋವಿಡ್ ಹಿನ್ನಲೆಯಲ್ಲಿ ಲಾಕ್‌ಡೌನ್ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಅಬಕಾರಿ ಇಲಾಖೆಯವರು ಎಲ್ಲಾ ಮದ್ಯದ ಅಂಗಡಿಗಳನ್ನು ಮುಚ್ಚಿಸಿ, ಬೀಗ ಹಾಕಿ, ಸೀಲು ಮಾಡಿದ್ದರು ಎಂದರೆ ಸರಿ. ತನಿಖಾಧಿಕಾರಿಗಳು ನನಗೆ ಮತ್ತು ಚಾಸಾ.2 ರವರಿಗೆ ಗುಂಡೇರಿ ಗ್ರಾಮದ ಶ್ರೀ ರಾಘವೇಂದ್ರ

ವೈನ್‌ಶಾಪ್‌ನ ಮೇಲ್ಛಾವಣಿಯನ್ನು ಹೊಡೆದು ಯಾರೋ ಕಳ್ಳತನ ಮಾಡಿಕೊಂಡು ಹೋಗಿರುವುದಾಗಿ ಆ ಕುರಿತು ಮಹಜರನ್ನು ಮಾಡುತ್ತಿರುವುದಾಗಿ ದಿನಾಂಕ 16.04.2020 ರಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ.6 ರವರು ಸದರಿ ಮದ್ಯದ ಅಂಗಡಿಯನ್ನು ಪರಿಶೀಲನೆ ಮಾಡಿ ಮದ್ಯ ವ್ಯತ್ಯಾಸವಾಗಿರುವ ಬಗ್ಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಒಟ್ಟು 27 ಲೀಟರ್ ಮದ್ಯ ಮತ್ತು 12 ಲೀಟರ್ ಬಿಯರ್ ವ್ಯತ್ಯಾಸ ಆಗಿರುವ ಬಗ್ಗೆ ನಮೂದಿಸಿ ರಾತ್ರಿ 8.30 ರಿಂದ 10.30 ರವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಪೊಲೀಸರು ನಮ್ಮನ್ನು ಕರೆದು ಸಹಿ ಪಡೆದುಕೊಂಡರು ಎಂದು ಹೇಳುತ್ತಾರೆ. ನಂತರ ಚಾಸಾ.13 ರವರು ಮದ್ಯದ ಅಂಗಡಿಯ ಮೇಲ್ಛಾವಣಿ ಹೊಡೆದಿರುವ ಬಗ್ಗೆ ರಾತ್ರಿ 11 ರಿಂದ 12 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರೆ ಮದ್ಯದ ಅಂಗಡಿಯ ಮೇಲ್ಛಾವಣಿ ತೆಗೆದು ಕಳ್ಳತನ ಮಾಡಿರುತ್ತಾರೆ ಎಂದು ನಂತರ ತಿಳಿಯಿತು ಎಂದರೆ ಸರಿಯಲ್ಲ. ಈ ಕುರಿತು ನಾನು ತನಿಖಾಧಿಕಾರಿಗಳ ಮುಂದೆ ದಿ.16.09.2020 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ.8 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರ ನನಗೆ ತಿಳಿದಿದ್ದರು, ಆರೋಪಿತರು ನಮ್ಮ ಪಕ್ಕದ ಗ್ರಾಮದವರಾಗಿರುವ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ನೇ ಆರೋಪಿತರ ಪರ ಶ್ರೀ ಯು.ಎಸ್. ವಕೀಲರಿಂದಃ**

3. ನಿಪಿ.2 ಮತ್ತು 4 ರ ಮಹಜರುಗಳಲ್ಲಿ ಬರೆದಿರುವ ವಿಚಾರಗಳ ಕುರಿತು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಸಹಿ ಮಾಡಿ ಎಂದು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ 4 ನೇ ಆರೋಪಿತರ ಪರ ಶ್ರೀ ಎಸ್.ವಿ ವಕೀಲರಿಂದಃ**

4. ಪೊಲೀಸರು ಛಾಯಾಚಿತ್ರ ತೆಗೆಯಲು ನಿಲ್ಲುವಂತೆ ಹೇಳಿದ ಮೇರೆಗೆ ನಾನು ನಿಪಿ.7 ರ ಛಾಯಾಚಿತ್ರದಲ್ಲಿ ನಿಂತಿರುತ್ತೇನೆ ಎಂದರೆ ಸರಿ. ನಿಪಿ.7 ರ ಛಾಯಾಚಿತ್ರವನ್ನು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಳಲ್ಕೆರೆ